1) ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\7500\2014\ಸನಿಕಾಸ-1 ಬಹುಮಹಡಿಗಳ ಕಟ್ಟಡ,
& 2) ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\666\2015\ಸನಿಕಾಸ-1 ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 29/07/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಕೆ.ವಿ.ರೋಹಿತ್ ಬಿನ್ ಕೆ.ಟಿ.ವೆಂಕಟೇಶ ನಾರಾಯಣ ಉರ್ಡಿಗೆರೆ ಕ್ರಾಸ್, ಕೊರಟಗೆರೆ ಪಟ್ಟಣ, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ಕೊರಟಗೆರೆ ಪಟ್ಟಣದ ಉರ್ಡಿಗೆರೆ ಕ್ರಾಸ್‌ನ ನಿವಾಸಿಯಾದ ಶ್ರೀ.ಕೆ.ವಿ.ರೋಹಿತ್ ಬಿನ್ ಕೆ.ಟಿ.ವೆಂಕಟೇಶ ನಾರಾಯಣ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಕೊರಟಗೆರೆ ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿ ಶ್ರೀ.ಶ್ರೀನಿವಾಸ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಮುದ್ದಪಣ್ಣೆ ಗ್ರಾಮದ ಸರ್ವೆ ನಂ. 84/1ಬಿ ರಲ್ಲಿಯ 1 ಎಕರೆ 14 ಕುಂಟೆ ಜಮೀನನ್ನು ಶ್ರೀಮತಿ.ರಮಾಮಣಿ ಕೋಂ ಎ.ಡಿ.ಬಲರಾಮಯ್ಯ ರವರಿಗೆ ತುಮಕೂರು ಜಿಲ್ಲಾಧಿಕಾರಿಗಳು ಭೂ ಪರಿವರ್ತನೆ ಆದೇಶ ಮಾಡಿಕೊಟ್ಟಿದ್ದು ಸದರಿ ಆದೇಶದಲ್ಲಿಯ ಷರತ್ತುಗಳನ್ನು ಉಲ್ಲಂಘಿಸಿ 30 ನಿವೇಶನಗಳ ನಕ್ಷೆ ನೀಡಿ 37 ನಿವೇಶಗಳನ್ನು ಖಾತೆ ಮಾಡಿ 30 ಅಡಿ ರಸ್ತೆ ಎಂದು ನಕ್ಷೆಯಲ್ಲಿ ತೋರಿಸಿ ನೋಂದಣಿ ಪತ್ರದಲ್ಲಿ 25 ಅಡಿ ರಸ್ತೆ ಎಂದು ಸೂಚಿಸಿ ಎದುರುದಾರರು ಜಿಲ್ಲಾಧಿಕಾರಿಗಳ ಆದೇಶದ ಷರತ್ತುಗಳನ್ನು ಉಲ್ಲಂಘಿಸಿದ್ದಾರೆ. ಸದರಿ ಜಮೀನು ಕೃಷಿ ಯೋಗ್ಯ ಜಮೀನಾಗಿದ್ದು ಗೋಕುಲ ಕೆರೆ ಅಚ್ಚುಕಟ್ಟು ಪ್ರದೇಶಕ್ಕೆ ಸೇರಿದ್ದು ಇದೆ. ಸದರಿ ಲೇಔಟ್‌ನಲ್ಲಿ ಚರಂಡಿ ಬೀದಿ ದೀಪ ಕುಡಿಯುವ ನೀರು ಮುಂತಾದ ಮೂಲ ಭೂತ ಸೌಕರ್ಯಗಳನ್ನು ಮಾಡದೇ ನಿವೇಶನಗಳನ್ನು ಸದರಿ ಶ್ರೀಮತಿ.ರಮಾಮಣಿಯವರು ಎದುರುದಾರರ ಜೊತೆ

ಷಾಮೀಲಾಗಿ ಪರಭಾರೆ ಮಾಡಿದ್ದಾರೆ, ಆದ್ದರಿಂದ ಸದರಿ ಭೂ ಪರಿವರ್ತನೆಯನ್ನು ರದ್ದುಗೊಳಿಸಬೇಕೆಂದು ಕೋರಿದ್ದಾರೆ.

3. ದೂರಿನ ಬಗ್ಗೆ ಎದುರುದಾರರುಗಳಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಜಿಲ್ಲಾಧಿಕಾರಿಗಳು ಸದರಿ ಜಮೀನನ್ನು ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿದ್ದು, ಅದರಲ್ಲಿ ಒಟ್ಟು 1 ಎಕರೆ 5 ಗುಂಟೆ ಜಮೀನಿಗೆ ಅಭಿವೃದ್ಧಿ ಶುಲ್ಕವನ್ನು ದೂರುದಾರರಿಂದ ದಿನಾಂಕ:07/07/1996 ರಂದು ಪಾವತಿಸಿಕೊಂಡು 1–37 ನಿವೇಶನಗಳನ್ನು ಖಾತೆ. ಮಾಡಿದ್ದಾರೆಂದು ಅಸೆಸ್‌ಮೆಂಟ್ ಪುಸ್ತಕದ ಸಂಖ್ಯೆ:12ರಲ್ಲಿ ಪುಟ 52ರಲ್ಲಿ ವಿಷಯ ನಿರ್ವಾಹಕರಾದ ಶ್ರೀ.ಆರ್.ಲಕ್ಷ್ಮಿನರಸಿಂಹಯ್ಯನವರು ಲಿಖಿತವಾಗಿ ಅಸೆಸ್‌ಮೆಂಟ್ ದಾಖಲಾತಿಗಳಲ್ಲಿ ನೊಂದಾಯಿಸಿದ್ದು, ಹಿಂದಿನ ನಿವೃತ್ತ ಮುಖ್ಯಾಧಿಕಾರಿಯಾದ ಶ್ರೀ.ರಂಗಪ್ಪನವರು ಸಹಿ ಮಾಾಡಿದ್ದಾರೆ. ಈ ಬಗ್ಗೆ ಸದರಿ ಶ್ರೀ.ಲಕ್ಷ್ಮಿನರಸಿಂಹಯ್ಯನವರಿಗೆ ದಿನಾಂಕ:27.9.2014ರಂದು ತಿಳಿವಳಿಕೆ ನೋಟೀಸನ್ನು ನೀಡಿದ್ದು, ಅವರು ಅದನ್ನು ಪಡೆಯದೆ ತಿರಸ್ಕರಿಸಿದ್ದಾರೆ. ಸದರಿ ಜಮೀನಿನ ಸರ್ವೆ ನಂಬರಿನಲ್ಲಿ ನೋಂದಾಯಿಸಿದ ಬಗ್ಗೆ ಖಾತೆ ನಂ: ನಮೂನೆ–3ನ್ನು ಹಿಂದಿನ ವಿಷಯ ನಿರ್ವಾಹಕರಾದ ಶ್ರೀ.ಗೋಪಾಲ ರವರು ನೀಡಿದ್ದು ಸದರಿ ನಮೂನೆ–3 ಪರಿಶೀಲಿಸಲು ಕಳುಹಿಸಿದಂತೆ ಕಾರಣ ಕೇಳಿ ನೋಟೀಸನ್ನು ಅವರಿಗೆ ದಿನಾಂಕ:8.9.2014ರಂದು ಜಾರಿ ಮಾಡಿದ್ದು ಈವರೆಗೂ ಸದರಿ ಗೋಪಾಲ ಅವರಿಂದ ಯಾವುದೇ ಮಾಹಿತಿ ಬಂದಿಲ್ಲ ಅಭಿವೃದ್ಧಿ ಶುಲ್ಕ ಪಾವತಿ ರಸೀದಿ ಪರಿಶೀಲಿಸಲು ಕರ ವಸೂಲಿಗಾರರಾದ ಶ್ರೀ.ಶೈಲೇಂದ್ರ ರವರಿಗೆ ದಿನಾಂಕ:22.11.2014ರಂದು ತಿಳುವಳಿಕೆ ಪತ್ರ ಜಾರಿ ಮಾಡಿದ್ದು, ಅದಕ್ಕೆ ಅವರು ಸದರಿ ಅವಧಿಯಲ್ಲಿ ರಸೀದಿಯನ್ನು ನಮೂದಿಸಿಲ್ಲವೆಂದು ದಿನಾಂಕ:05.01.2015ರಂದು ಲಿಖಿತ ಮನವಿಯನ್ನು ನೀಡಿದ್ದಾರೆ;

ಖಾತೆ ನೋಂದಾಯಿಸಿದ ಬಗ್ಗೆ ಕೊರಟಗೆರೆ ಪಟ್ಟಣ ಪಂಚಾಯ್ತಿಯ 9 ಜನ ಹಾಲಿ ಸದಸ್ಯರು ಲಿಖಿತವಾಗಿ ಮನವಿ ನೀಡಿ ಸದರಿ ಜಮೀನು ಭೂ ಪರಿವರ್ತನೆಯಾಗಿದ್ದು, ಖಾತೆ ನೋಂದಾಯಿಸಿದ್ದು ಅಭಿವೃದ್ಧಿ ಶುಲ್ಕ ಪಾವತಿಸದೆ ಇದ್ದ ಬಗ್ಗೆ ಅಂದಾಜು ತಯಾರಿಸಿ ಅಭಿವೃದ್ಧಿ ಶುಲ್ಕವನ್ನು ಪಡೆದುಕೊಂಡು ಸದರಿ ಜಮೀನಿನ ಹಿಂದಿನ ಖಾತೆಯನ್ನು ಮುಂದುವರೆಸಲು ಲಿಖಿತವಾಗಿ ವರದಿ ನೀಡಿದ್ದಾರೆ. ಆದ್ದರಿಂದ, ಪಟ್ಟ ಪಂಚಾಯ್ತಿಯ ಆರ್ಥಿಕ ಹಿತದೃಷ್ಠಿಯಿಂದ ಕಚ್ಚಾ ನಕ್ಷೆಯಂತೆ ಉಧ್ಯಾನವನಕ್ಕಾಗಿ 40X25+9/2 ಅಡಿಗಳಷ್ಟು ಹಾಗೂ ಸಾರ್ವಜನಿಕರ ಉದ್ದೇಶಕ್ಕಾಗಿ 40x26+14/2 ಅಡಿಗಳಷ್ಟು ಜಾಗವನ್ನು ಮೀಸಲಾಗಿಟ್ಟು ಅದನ್ನು ಪಟ್ಟಣ ಪಂಚಾಯಿತಿಗೆ ನೋಂದಾಯಿಸಿಕೊಂಡು ಹಾಲಿ ಇವರು ಖಾತೆ ಸಂಖ್ಯೆಗಳನ್ನು ಮುಂದುವರೆಸಲು ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿದ್ದಾರೆ. ಸದರಿ ಸಾಮಾನ್ಯ ಸಭೆಯ ತೀರ್ಮಾನದ ಬಗ್ಗೆ ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಿಗೆ ಪತ್ರ ಬರೆದಿದ್ದು, ಅವರ

ಆದೇಶದಂತೆ ಸೂಕ್ತ ಕ್ರಮ ವಹಿಸಲಾಗುವುದು ಮತ್ತು ಇದರಲ್ಲಿ ತನ್ನ ತಪ್ಪು ಇಲ್ಲವೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಎದುರುದಾರರ ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದು, ತಮ್ಮ ಪ್ರತ್ಯುತ್ತರದಲ್ಲಿ –

ಅಭಿವೃದ್ಧಿ ಶುಲ್ಕವನ್ನು ಪಡೆಯದೆ ಸದರಿ ಜಮೀನಿನಲ್ಲಿ 30 ನಿವೇಶನಗಳ ಬದಲು 37 ನಿವೇಶನಗಳನ್ನು ಮಾಡಿದ್ದು, ಪಾರ್ಕ್ ಮತ್ತು ರಸ್ತೆಗೆ ಜಾಗೆಯನ್ನು ಪಟ್ಟಣ ಪಂಚಾಯಿತಿ ಹೆಸರಿಗೆ ನೋಂದಾಯಿಸದೇ ಮೂಲ ಸೌಕರ್ಯವನ್ನು ಒದಗಿಸದೇ ಸದರಿ ಶ್ರೀಮತಿ.ರಮಾಮಣಿ ಯವರು ಅಕ್ರಮವಾಗಿ ನಿವೇಶನಗಳನ್ನು ದುಭಾರಿ ಬೆಲೆಗೆ ಸಾರ್ವಜನಿಕರಿಗೆ ಮಾರಿ ವಂಚನೆ ಮಾಡಿ ಸದರಿ ನಿವೇಶನಗಳ ಖಾತೆಯನ್ನು ವಜಾ ಮಾಡಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವಂತೆ ಹೇಳಿದ್ದಾರೆ.

5. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ಸಲ್ಲಿಸುವಂತೆ ತುಮಕೂರು ಜಿಲ್ಲೆ ಕರ್ನಾಟಕ ಲೋಕಾಯುಕ್ತ ಆರಕ್ಷಕ ಅಧೀಕ್ಷಕರು (ಇನ್ನು ಮುಂದೆ, 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ರವರನ್ನು ಕೇಳಲಾಗಿ, ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ –

ಸರ್ವೆ ನಂ.84/1ಬಿ ರಲ್ಲಿ ವಿಂಗಡಿಸಿದ್ದ 30 ನಿವೇಶನಗಳ ನಕ್ಷೆಗೆ ಭೂ ಪರಿವರ್ತನೆ ಆದೇಶ ನೀಡಿರುವುದು ಕಂಡು ಬಂದಿದ್ದರೂ ಶ್ರೀಮತಿ.ರಮಾಮಣಿ ಯವರು ತದನಂತರದಲ್ಲಿ ಯಾವ ಆದೇಶದ? ರೀತಿ 37 ನಿವೇಶನಗಳನ್ನು ಮತ್ತು ರಸ್ತೆ ವಿಸ್ತೀರ್ಣ 30 ಅಡಿಗೆ ಬದಲಾಗಿ 25 ಅಡಿ ವಿಂಗಡಿಸಿದ್ದಾರೆ ಎನ್ನುವುದಕ್ಕೆ ಆದೇಶವನ್ನು ಶ್ರೀಮತಿ.ರಮಾಮಣಿ ಯವರಿಂದ ಪಡೆಯದೇ ಮತ್ತು ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆಯಾಗಿದೆಯೇ! ಇಲ್ಲವೇ! ಎಂಬುದನ್ನು ಪರಿಶೀಲಿಸದೇ ಏಕಾಏಕಿ ಕೊರಟಗೆರೆ ಪಟ್ಟಣ ಪಂಚಾಯತ್‌ನಲ್ಲಿ ಭೂ ಪರಿವರ್ತನೆ ಆದೇಶ ಪಡೆಯುವ ಪೂರ್ವದಲ್ಲಿಯೇ ಅಂದರೆ 10–11 ವರ್ಷಗಳ ಹಿಂದೆಯೇ ಅಭಿವೃದ್ಧಿ ಶುಲ್ಕ ಎಷ್ಟು? ಎಂದು ನಮೂದಿಸದೇ ರಸೀಧಿ ಸಂ:77825 ದಿನಾಂಕ:07/07/1999ನ್ನು ಪಡೆದಿರುವುದಾಗಿ ನಮೂದಿಸಿರುವುದು ಮತ್ತು ತದನಂತರದಲ್ಲಿ ವಿಚಾರಣೆಗೆ ಹಾಜರಾಗಿ ಮೇಲ್ಕಂಡ ಸರ್ವೆ ನಂಬರುಗಳ ನಿವೇಶನಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಒದಗಿಸದೇ ಇರುವುದರಿಂದ ಮುಖ್ಯಾಧಿಕಾರಿ ಶ್ರೀ.ರಂಗಪ್ಪ ಮತ್ತು ವಿಷಯ ನಿರ್ವಾಹಕ ಶ್ರೀ.ಲಕ್ಷ್ಮಿನರಸಿಂಹಯ್ಯ ರವರು ಭಾಗಿಯಾಗಿದ್ದಾರೆ. ಅದೇ ರೀತಿ, ಮೇಲ್ಕಂಡ ನಿವೇಶನಗಳ ನೋಂದಣಿ ಸಂಬಂಧ 2015–16ನೇ ಸಾಲಿನ ಸ್ವತ್ತಿಗೆ ಸಂಬಂಧಿಸಿದಂತೆ ನಮೂನೆ–3ನ್ನು ನೀಡಿರುವುದು ಶ್ರೀ.ಸಿ.ಗೋಪಾಲ್, ದ್ವಿತೀಯ ದರ್ಜೆ ಸಹಾಯಕ ಹಾಗೂ ಹಿಂದಿನ ವಿಷಯ

S7 M.

ನಿರ್ವಾಹಕರು, ಪಟ್ಟಣ ಪಂಚಾಯತ್ ಪ್ರಸ್ತುತ ನೆಲಮಂಗಲ ಪುರಸಭೆ ಯಲ್ಲಿದ್ದು, ಸದರಿಯವರು ಭ್ರಷ್ಟಾಚಾರದಲ್ಲಿ ತೊಡಗಿರುವುದು ದೃಢಪಟ್ಟಿದೆಯೆಂದು ಹೇಳಿದ್ದಾರೆ.

6. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಹೇಳಿರುವ ಅಧಿಕಾರಿ\ ಸಿಬ್ಬಂಧಿಗಳಾದ ಕೊರಟಗೆರೆ ಮುಖ್ಯಾಧಿಕಾರಿ ಶ್ರೀ.ರಂಗಪ್ಪ (ಪ್ರಸ್ತುತ ನಿವೃತ್ತ), ಹಾಲೀ ವಾಸ ಬಡವನಹಳ್ಳಿ, ಮಧುಗಿರಿ ತಾಲ್ಲೂಕ್, ವಿಷಯ ನಿರ್ವಾಹಕ ಶ್ರೀ.ಲಕ್ಷ್ಮಿನರಸಿಂಹಯ್ಯ ಮತ್ತು ಶ್ರೀ.ಸಿ.ಗೋಪಾಲ್, ದ್ವಿತೀಯ ದರ್ಜೆ ಸಹಾಯಕ ಹಾಗೂ ಹಿಂದಿನ ವಿಷಯ ನಿರ್ವಾಹಕರು, ಪಟ್ಟಣ ಪಂಚಾಯತ್, ಪ್ರಸ್ತುತ ನೆಲಮಂಗಲ ಪುರಸಭೆ ರವರುಗಳನ್ನು 2 ರಿಂದ 4ನೇ ಎದುರುದಾರರೆಂದು ಮುಖಪುಟದಲ್ಲಿ ಸೇರಿಸಿ, ಸದರಿ 1 ರಿಂದ 4ನೇ ಎದುರುದಾರರುಗಳಿಂದ ತನಿಖಾ ವರದಿಗೆ ಉತ್ತರವನ್ನು ಕೇಳಲಾಯಿತು.

7. ಒಂದನೇ (1ನೇ) ಎದುರುದಾರರು ತಮ್ಮ ಉತ್ತರದಲ್ಲಿ –

ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರಿಗೆ ಪತ್ರ ಬರೆದು ಅನುಮೋದಿತ ನಕ್ಷೆ ನೀಡುವಂತೆ ಕೋರಿದ್ದು, ಅದರಂತೆ ಸದರಿಯವರು ಸದರಿ ಜಮೀನಿಗೆ ಸಂಬಂಧಪಟ್ಟಂತೆ, ಅನುಮೋದಿತ ನಕ್ಷೆಯನ್ನು ನೀಡಿದ್ದಾರೆ. ಆ ಪ್ರಕಾರ, ಕ್ರಮ ಜರುಗಿಸಲಾಗಿದೆಯೆಂದು ಹೇಳಿದ್ದಾರೆ.

8. ಎರಡನೇ (2ನೇ) ಎದುರುದಾರರು ತಮ್ಮ ಉತ್ತರದಲ್ಲಿ –

ಸದರಿ ದೂರಿನಲ್ಲಿನ ಅಂಶಗಳಿಗೆ ಸಂಬಂಧಪಟ್ಟಂತೆ, ತಾವು ಯಾವುದೇ ಕರ್ತವ್ಯ ಲೋಪ ಎಸಗಿಲ್ಲ, ದೂರುದಾರರು ಸುಳ್ಳು ಮಾಹಿತಿಯ ಆಧಾರದ ಮೇಲೆ ದೂರು ಸಲ್ಲಿಸಿದು, ತನಿಖಾಧಿಕಾರಿಗಳು ಸಹ ತಮ್ಮ ವಿರುದ್ಧ ಸುಳ್ಳು ವರದಿಯನ್ನು ನೀಡಿದ್ದಾರೆ. ಸದರಿ ಜಮೀನಿಗೆ ಸಂಬಂಧಪಟ್ಟಂತೆ, ಜಿಲ್ಲಾಧಿಕಾರಿಗಳು ಪರಿವರ್ತನಾದೇಶ ನೀಡಿದ್ದು, ಆ ಪ್ರಕಾರ ಕ್ರಮ ಜರುಗಿಸಲಾಗಿದೆ. ಸರ್ಕಾರದ ಸುತ್ತೋಲೆ ಮತ್ತು ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಕರ್ತವ್ಯ ನಿರ್ವಹಿಸಿದೆಯೆಂದು ಹೇಳಿದ್ದಾರೆ.

9. ಮೂರನೇ (3ನೇ) ಎದುರುದಾರರು ತಮ್ಮ ಉತ್ತರದಲ್ಲಿ –

ತಾವು 4 ವರ್ಷಗಳಿಂದ ಪಟ್ಟಣ ಪಂಚಾಯತ್ ವಸತಿ ಗೃಹದಲ್ಲಿ ವಾಸವಾಗಿದ್ದು, ಸಮಾನ ವೇತನದಡಿ ಕೆಲಸ ನಿರ್ವಹಿಸುತ್ತಿದ್ದು, ಇನ್ನು ಸರ್ಕಾರಿ ನೌಕರಿ ಖಾಯಂ ಆಗಿರುವುದಿಲ್ಲ. ದೂರುದಾರರು ಸುಳ್ಳು ಮಾಹಿತಿಯ ಆಧಾರದ ಮೇಲೆ ತಮ್ಮ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿದ್ದಾರೆ. ತಾವು ಊರಿನ ಚರಂಡಿ ಮತ್ತು ಕೊಳಚೆ ಪ್ರದೇಶಗಳನ್ನು ಸ್ವಚ್ಛ ಮಾಡಿಸಿ, ಸೊಳ್ಳೆ ಬರದಂತೆ ನೋಡಿಕೊಳ್ಳುವುದಷ್ಟೆ ತನ್ನ ಕೆಲಸವಾಗಿದೆಯೆಂದು ಹೇಳಿದ್ದಾರೆ.

10. ನಾಲ್ಕನೇ (4ನೇ) ಎದುರುದಾರರು ತಮ್ಮ ಉತ್ತರದಲ್ಲಿ –

ಸರ್ವೆ ನಂ.84/1ಬಿ ಗೆ ಸಂಬಂಧಿಸಿದಂತೆ, ಖಾತಾ ಬದಲಾವಣೆ ಮಾಡುವ ಅಧಿಕಾರ ತಮಗಿಲ್ಲ. ಅದೇ ರೀತಿ, ನಮೂನೆ–3ನ್ನು ನೀಡುವ ಅಧಿಕಾರವನ್ನು ಸಹ ಹೊಂದಿಲ್ಲ. ದೂರುದಾರರು ಸುಳ್ಳು ಮಾಹಿತಿಯ ಆಧಾರದ ಮೇಲೆ ತಮ್ಮ ವಿರುದ್ಧ ಸುಳ್ಳು ದೂರನ್ನು ಸಲ್ಲಿಸಿರುವುದಾಗಿ ಹೇಳಿದ್ದಾರೆ.

11. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ಮುದ್ದಪಣ್ಣೆ ಗ್ರಾಮದ ಸರ್ವೆ ನಂ. 84/1ಬಿ ರಲ್ಲಿಯ 1 ಎಕರೆ 14 ಗುಂಟೆ ಜಮೀನನ್ನು ಜಿಲ್ಲಾಧಿಕಾರಿಗಳ ಆದೇಶ ಸಂ:ಎಎಲ್‌ಎನ್ (ಎಂಜಿ) ಸಿಆರ್ 55/2010–11ರಂತೆ ಭೂ ಪರಿವರ್ತನೆ ಆದೇಶವಾಗಿದ್ದು, ಸದರಿ ಆದೇಶದಂತೆ 30 ನಿವೇಶನಗಳನ್ನು ನಿರ್ಮಾಣ ಮಾಡುವ ಬಗ್ಗೆ ಅನುಮೋದನೆ ಪಡೆದಿದ್ದು, ಆದರೆ 37 ನಿವೇಶಗಳನ್ನು ಮಾಡಿ ಖಾತಾ ಬದಲಾವಣೆ ಮಾಡಿರುವುದು ಕಂಡು ಬಂದಿದೆ. ಅದೇ ರೀತಿ, ಸದರಿ ಜಮೀನಿನಲ್ಲಿ ಭೂ ಪರಿವರ್ತನೆ ಆದೇಶವಾದ 2 ವರ್ಷಗಳೊಳಗಾಗಿ ಉದ್ದೇಶಿತ ಉಪಯೋಗಕ್ಕಾಗಿ ಬಳಸುವ ಬಗ್ಗೆ ಆದೇಶವಾಗಿದ್ದು, ಅದನ್ನು ಸರಿಯಾದ ರೀತಿ ಕಾರ್ಯರೂಪಕ್ಕೆ ತಂದಿಲ್ಲ. ಸದರಿ ಜಮೀನಿನಲ್ಲಿ ನಕ್ಷೆಯಲ್ಲಿ 30 ಅಡಿ ರಸ್ತೆ ಇರುವುದಾಗಿ ತೋರಿಸಿದ್ದು, 25 ಅಡಿ ರಸ್ತೆ ಇದೆಯೆಂದು ಕ್ರಯ ಪತ್ರದಲ್ಲಿ ನಮೂದಿಸಿರುವುದು ಕಂಡು ಬಂದಿದೆ. ಸದರಿ ಜಮೀನಿಗೆ ಸಂಬಂಧಪಟ್ಟ ನಕ್ಷೆಯಲ್ಲಿ ಪಾರ್ಕ್, ಒಳಚರಂಡಿ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಸ್ಥಳ ಬಿಟ್ಟಿಲ್ಲ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ಜಿಲ್ಲಾಧಿಕಾರಿಗಳ ಪರಿವರ್ತನಾದೇಶದಂತೆ ನಗರ ಯೋಜನಾ ಪ್ರಾಧಿಕಾರದಿಂದ ಅನುಮೋದಿತ ನಕ್ಷೆ ಪಡೆಯದೇ ನಿವೇಶನಗಳನ್ನಾಗಿ ಪರಿವರ್ತಿಸಿ ಸದರಿ ಜಮೀನಿನ ಭೂ ಮಾಲೀಕರು ಮಾರಾಟ ಮಾಡಿದ್ದು, ಅದರಂತೆ ಖಾತಾ ಬದಲಾವಣೆ ಮಾಡಿರುವುದು ಕಂಡು ಬಂದಿದೆ. ಸದರಿ ಜಮೀನಿಗೆ ಸಂಬಂಧಪಟ್ಟಂತೆ, 2 ರಿಂದ 4ನೇ ಎದುರುದಾರರು ಸರಿಯಾದ ರೀತಿ ದಾಖಲೆಗಳನ್ನು ಪರಿಶೀಲಿಸದೇ ಖಾತಾ ಬದಲಾವಣೆ ಮಾಡಿರುವುದು ಕಂಡು ಬಂದಿದೆ. ಅದೇ ರೀತಿ, ಸದರಿ

ನಿವೇಶನಗಳಿಗೆ ಸಂಬಂಧಪಟ್ಟಂತೆ ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅನುಮೋದನೆ ಪಡೆಯಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸದೇ ಕ್ರಯದಂತೆ ಖಾತಾ ಬದಲಾವಣೆ ಮಾಡಿರುವುದು, ಅದೇ ರೀತಿ ಭೂ ಪರಿವರ್ತನಾದೇಶ ಪಡೆಯುವ ಪೂರ್ವದಲ್ಲಿಯೇ ಅಂದರೆ, 10-11 ವರ್ಷಗಳ ಹಿಂದೆ ಅಭಿವೃದ್ಧಿ ಶುಲ್ಕ ಎಷ್ಟು? ಎಂದು ನಮೂದಿಸದೇ, ರಸೀಧಿ ಸಂಖ್ಯೆ:77825 ದಿ:07/07/1999ರಲ್ಲಿ ಪಡೆದಿರುವುದಾಗಿ ದಾಖಲೆಗಳಿಂದ ಕಂಡು ಬಂದಿದೆ. ಸದರಿ ಕ್ರಯಪತ್ರದ ಆಧಾರದ ಮೇಲೆ 2 ಮತ್ತು 3ನೇ ಎದುರುದಾರರು 2015-16ನೇ ಸಾಲಿನಲ್ಲಿ ನಮೂನೆ-3ನ್ನು ನೀಡಿರುವುದು ಸಹ ಕಂಡು ಬಂದಿದೆ. ಆದರೆ, ಆ ನಂತರ ಬಂದ ಮುಖ್ಯಾಧಿಕಾರಿಯಾದ 1ನೇ ಎದುರುದಾರರು ಸದರಿ ಜಮೀನಿಗೆ ಸಂಬಂಧಪಟ್ಟಂತೆ, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು, ತುಮಕೂರು ರವರಿಂದ ಅನುಮೋದಿತ ನಕ್ಷೆ ಪಡೆದು ನಂತರದ ನಿವೇಶನಗಳ ವರ್ಗಾವಣೆಗೆ ಸಂಬಂಧಪಟ್ಟಂತೆ ಕ್ರಮ ಜರುಗಿಸಿರುವುದು ಕಂಡು ಬಂದಿದೆ. ಸದರಿ ಜಮೀನುಗಳಿಗೆ ಸಂಬಂಧಪಟ್ಟಂತೆ, ಭೂ ಪರಿವರ್ತನಾದೇಶ, ಕ್ರಯ ಹಾಗೂ ಖಾತಾ ಬದಲಾವಣೆಗೆ ಸಂಬಂಧಿಸಿದ ಅವಧಿಯಲ್ಲಿ 1ನೇ ಎದುರುದಾರರು ಕೆಲಸ ನಿರ್ವಹಿಸದೇ ಇರುವುದರಿಂದ, ಇದರಲ್ಲಿ 1ನೇ ಎದುರುದಾರರ ಯಾವುದೇ ಕರ್ತವ್ಯ ಲೋಪ ಕಂಡು ಬಂದಿಲ್ಲ. ಆದರೆ, 2 ರಿಂದ 4ನೇ ಎದುರುದಾರರು ಸದರಿ ಅವಧಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಸದರಿ ಜಮೀನಿಗೆ ಸಂಬಂಧಪಟ್ಟಂತೆ, ಭೂ ಪರಿವರ್ತನಾದೇಶ, ಸಹಾಯಕ ನಿರ್ದೇಶಕರು, ನಗರ ಹಾಗೂ ಗ್ರಾಮಾಂತರ ಯೋಜನಾ ಇಲಾಖೆ, ತುಮಕೂರು ರವರಿಂದ ಅನುಮೋದಿತ ನಕ್ಷೆ ಪಡೆಯಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸದೇ, ಸದರಿ ಜಮೀನಿನಲ್ಲಿ ಪಾರ್ಕ್, ಸಾರ್ವಜನಿಕ ಸೌಲಭ್ಯಕ್ಕೆ ಸಂಬಂಧಪಟ್ಟಂತೆ ಸ್ಥಳ ಬಿಡಲಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಪರಿಶೀಲಿಸದೇ ಹಾಗೂ ಪರಿವರ್ತನಾದೇಶ ಮಂಜೂರಾಗುವ ಮೊದಲೇ ಕಂದಾಯ ರಸೀಧಿ ನೀಡಿ ಖಾತಾ ಬದಲಾವಣೆ ಮಾಡಿ, ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ.

12. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 3 ಮತ್ತು 4ನೇ ಎದುರುದಾರರುಗಳ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

13. ಆದ್ದರಿಂದ, ಸದರಿ ಜಮೀನಿನಲ್ಲಿ ಪಾರ್ಕ್, ರಸ್ತೆ, ಸಾರ್ವಜನಿಕ ಸೌಲಭ್ಯಕ್ಕೆ ಸಂಬಂಧಿಸಿದಂತೆ ಸ್ಥಳ ಬಿಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

49

14. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 29/7/17.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.